**MVC.NO.4325/2025**
**PW.1**

**<u>ದಿನಾಂಕಃ 08.07.2026. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆಃ ಶ್ರೀ.ಎಂ.ಕೆ. ಅರ್ಜಿದಾರರ ಪರ ವಕೀಲರಿಂದಃ</u>**

ನಾನು ಸಲ್ಲಿಸಿದ ಸಾಕ್ಷ್ಯ ಸ್ವರೂಪದ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಯಿಸಿದ್ದು ಅದರಲ್ಲಿ ಬರೆದ ಅಂಶಗಳು ನಿಜ ಇವೆ ಹಾಗೂ ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಡಿಪಸಿರುತ್ತೇನೆ. ಆ ದಾಖಲೆಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.</u>**

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ನಿಜ ಪ್ರತಿ |
| ನಿ.ಪಿ.2 | ದೂರಿನ ನಿಜ ಪ್ರತಿ |
| ನಿ.ಪಿ.3 | ಸ್ಥಳ ಮಹಜರ್ ನ ನಿಜ ಪ್ರತಿ |
| ನಿ.ಪಿ.4 | ಸ್ಥಳ ನಕ್ಷೆಯ ನಿಜ ಪ್ರತಿ |
| ನಿ.ಪಿ.5 | IMV ವರದಿಯ ನಿಜ ಪ್ರತಿ |
| ನಿ.ಪಿ.6 | ಗಾಯದ ಪ್ರಮಾಣಪತ್ರದ ನಿಜ ಪ್ರತಿ |
| ನಿ.ಪಿ.7 | ದೋಷಾರೋಪಣಪಟ್ಟಿಯ ನಿಜ ಪ್ರತಿ |
| ನಿ.ಪಿ.8 | ಆಸ್ಪತ್ರೆಯವರು ನೀಡಿದ ಬಿಡುಗಡೆ ಪತ್ರ |
| ನಿ.ಪಿ.9 | ಅರ್ಜಿದಾರನ ಆಧಾರ್ ಕಾರ್ಡ್ ನ ನೋಟರಿ ಪ್ರತಿ |
| ನಿ.ಪಿ.10 | ಅರ್ಜಿದಾರನ ಪ್ಯಾನ್ ಕಾರ್ಡ್ ನ ನೋಟರಿ ಪ್ರತಿ |

ನಿ.ಪಿ.11 ವೈದ್ಯಕೀಯ ವೆಚ್ಚದ ಬಿಲ್ಲುಗಳು (8 in nos.)
ಒಟ್ಟಾರೆ ಮೊತ್ತ ರೂ.35,227/-

ನಿ.ಪಿ.12 ಔಷಧಿ ಚೀಟಿಗಳು (7 in nos.)

ನಿ.ಪಿ.13 ಮುಂಗಡ ವೈದ್ಯಕೀಯ ವೆಚ್ಚದ ಬಿಲ್ ಪಾವತಿ ರಸೀದಿ
(2 in nos.)

ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

(ಸಾಕ್ಷಿದಾರನು ಹಾಜರುಪಡಿಸಿದ ಅಸಲು ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಹಾಗೂ ಅವುಗಳ ನೋಟರಿ ಪ್ರತಿಗಳನ್ನು ತಾಳೆ ಮಾಡಿ ನೋಡಿ ಸರಿ ಇದ್ದ ಕಾರಣ ನೋಟರಿ ಪ್ರತಿಗಳನ್ನು ಅರ್ಜಿದಾರರ ಪರವಾಗಿ ಗುರುತಿಸಿ ಅಸಲು ದಾಖಲೆಗಳನ್ನು ಸಾಕ್ಷಿಗೆ ವಾಪಸ್ ನೀಡಲಾಯಿತು.)

**ಪಾಟೀ ಸವಾಲುಃ ಎರಡನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೆ.ಸರಿ ಇದೆ ಅಂತ ಒಪ್ಪಿರುವರು**

**14 ನೇ ಹೆಚ್ಚುವರಿ ನ್ಯಾಯಾಧೀಶರು,**
**ಲಘು ವ್ಯವಹಾರಗಳ ನ್ಯಾಯಾಲಯ,**
**ಬೆಂಗಳೂರು**